ಸಜ್ಜನಿಕೆ

✍️ಶ್ರೀವಲ್ಲಿ ರೈ ಮಾರ್ಟೆಲ್



ದಿನನಿತ್ಯ ಜನಸಂಚಾರದಿಂದ ತುಂಬಿರುತ್ತಿದ್ದ ಒಂದು ಹಳ್ಳಿಯಲ್ಲಿ ಹಾವೊಂದು ಆಗಾಗ ಪ್ರತ್ಯಕ್ಷವಾಗಿ ದಾರಿಹೋಕರಲ್ಲಿ ಭಯದ ವಾತಾವರಣವನ್ನು ಸೃಷ್ಟಿಸುತ್ತಿತ್ತು. ಈ ಅಪಾಯಕಾರಿ ಹಾವಿನ ಕಾಟದಿಂದ ಹೆದರಿದ ಊರಿನ ಜನರು, ಅಲ್ಲಿಯೇ ಇದ್ದ ಒಬ್ಬ ಸನ್ಯಾಸಿಯ ಬಳಿ ಹೋಗಿ, "ಸ್ವಾಮಿಗಳೇ, ಈ ಹಾವಿನ ಉಪದ್ರವದಿಂದ ಮಕ್ಕಳಿಗೆ ಆಟವಾಡಲು ಆಗುತ್ತಿಲ್ಲ, ನಮಗೆ ದಾರಿಯಲ್ಲಿ ಓಡಾಡಲು ಸಾಧ್ಯವಾಗುತ್ತಿಲ್ಲ. ಈ ಹಾವಿಗೆ ನೀವೇನಾದರೂ ಒಂದು ಪರಿಹಾರ ಮಾಡಬೇಕು" ಎಂದು ಬೇಡಿಕೊಳ್ಳುತ್ತಾರೆ. ಊರಿನ ಜನರ ಕಷ್ಟವನ್ನು ಅರಿತ ಸನ್ಯಾಸಿಯು ಹಾವಿಗೆ ಪ್ರತಿದಿನ ಸಜ್ಜನಿಕೆಯ ಪಾಠ ಮತ್ತು ಉಪದೇಶ ನೀಡಲು ಆರಂಭಿಸುತ್ತಾರೆ. ದಿನ ಕಳೆದಂತೆ ಹಾವಿನ ವರ್ತನೆ ಬದಲಾಗುತ್ತದೆ; ಅದರ ಮನಸ್ಥಿತಿ ಪರಿವರ್ತನೆಯಾಗಿ ಕ್ರೂರಿಯಾಗಿದ್ದ ಹಾವು ಸಜ್ಜನವಾಗಿ ಬದಲಾಗುತ್ತದೆ.

ಕ್ರಮೇಣ ದಿನಗಳು ಕಳೆದು ವರ್ಷಗಳು ಉರುಳುತ್ತವೆ. ಊರಿನಲ್ಲಿ ಶಾಂತ ಮತ್ತು ನೆಮ್ಮದಿಯ ಜೀವನ ನೆಲೆಸುತ್ತದೆ. ಅಂದಿನ ಮಕ್ಕಳು ಈಗ ದೊಡ್ಡವರಾಗುತ್ತಾರೆ, ಕೆಲವರು ಬೇರೆ ಊರುಗಳಿಗೆ ಹೋಗಿ ನೆಲೆಸುತ್ತಾರೆ.

ಸ್ವಲ್ಪ ಕಾಲದ ನಂತರ ಹುಟ್ಟಿದ ಹೊಸ ತಲೆಮಾರಿನ ಮಕ್ಕಳು ಬೆಳೆಯುತ್ತಾರೆ. ಒಂದು ದಿನ ಆಟವಾಡುತ್ತಿದ್ದ ಈ ಮಕ್ಕಳು, ಯಾರ ಉಸಾಬರಿಗೂ ಹೋಗದೆ ಸಜ್ಜನಿಕೆಯಿಂದ ಬದುಕುತ್ತಿದ್ದ ಆ ಹಾವಿನ ಹುತ್ತಕ್ಕೆ ಕೋಲಿನಿಂದ ಚುಚ್ಚಿ, ಕಲ್ಲನ್ನು ಎಸೆದು ಉಪದ್ರವ ಕೊಡಲು ಶುರು ಮಾಡುತ್ತಾರೆ. ಸಜ್ಜನನಾಗಿದ್ದ ಹಾವು ತಾಳ್ಮೆಯಿಂದ ಸಾಧ್ಯವಾದಷ್ಟು ಮಟ್ಟಿಗೆ ಸಹಿಸಿಕೊಳ್ಳಲು ಪ್ರಯತ್ನಿಸುತ್ತದೆ. ಆದರೆ ಮಕ್ಕಳ ಉಪದ್ರವ ಮಿತಿ ಮೀರಿದ್ದನ್ನು ಕಂಡು, ತಡೆಯಲಾಗದೆ ಮಕ್ಕಳ ಕಣ್ಣು ತಪ್ಪಿಸಿ ಸದ್ದಿಲ್ಲದೆ ಸನ್ಯಾಸಿಯ ಬಳಿ ಹೋಗಿ ತನ್ನ ಕಷ್ಟವನ್ನು ಹೇಳಿಕೊಂಡು ಕಣ್ಣೀರು ಹಾಕುತ್ತದೆ. ಆಗ ಸನ್ಯಾಸಿ ಹೇಳುತ್ತಾರೆ, "ನಾನು ನಿನಗೆ ಸಜ್ಜನನಾಗಿರು ಎಂದು ಬೋಧನೆ ಮಾಡಿದ್ದು ನಿಜ. ಆದರೆ ನಿನ್ನ ಮೈ ಮೇಲೆ ಬಿದ್ದರೂ ಸುಮ್ಮನೆ ಕೂರು ಎಂದು ನಾನು ಹೇಳಿಲ್ಲ. ಹೆಡೆ ಬಿಚ್ಚಿ ಬುಸುಗುಟ್ಟದೆ ಇರುವುದು ನಿನ್ನ ತಪ್ಪು" ಎಂದು ನೀತಿ ಪಾಠ ಮಾಡುತ್ತಾರೆ.

ಹಾಗೆಯೇ ನಮ್ಮ ಸಮಾಜದಲ್ಲಿಯೂ ಸಜ್ಜನ ವ್ಯಕ್ತಿ ತನ್ನ ಸ್ವಾಭಿಮಾನಕ್ಕೆ ಧಕ್ಕೆ ಅಥವಾ ಅಪಚಾರವಾದಾಗ ಘರ್ಜಿಸಲೇಬೇಕು, ನ್ಯಾಯಯುತವಾಗಿ ಹೋರಾಟ ಮಾಡಬೇಕು; ಅದು ತಪ್ಪಲ್ಲ.
ನಾವು ನಮ್ಮ ಮಕ್ಕಳಿಗೂ ಸರಳ ಮತ್ತು ಸಜ್ಜನಿಕೆಯ ಬದುಕಿನ ಮಹತ್ವವನ್ನು ತಿಳಿಸಬೇಕು. ಹಿರಿಯರಾದ ನಾವು ನಮ್ಮ ಜೀವನದಲ್ಲಿ ಸಜ್ಜನಿಕೆಯನ್ನು ಬೆಳೆಸಿಕೊಂಡರೆ, ಮಕ್ಕಳೂ ಅದನ್ನು ಅನುಸರಿಸುತ್ತಾರೆ ಎನ್ನುವುದರಲ್ಲಿ ಎರಡು ಮಾತಿಲ್ಲ. ಇಂತಹ ಬಾಳ್ವೆ ಬದುಕುವವರ ಜೀವನವು ಜೇನುತುಪ್ಪದಂತೆ ನಿತ್ಯವೂ ಸಿಹಿಯಾಗಿರುತ್ತದೆ.
ಸಜ್ಜನರ ಸಹವಾಸ ಹೆಜ್ಜೇನು ಸವಿದಂತೆ.